ದಿನಾಂಕಃ 05-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ–** ವಾದಿಯರ ಪರ ಶ್ರೀ ಎನ ಆರ ಬಿ ವಕೀಲರಿಂದ

ವಾದಿಯರು ಏನು ಪರಿಹಾರ ಕೇಳಿ ಈ ದಾವೆ ದಾಖಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಯರು ಹಾಗೂ 1 ನೇ ಪ್ರತಿವಾದಿಯ ಪರಿಚಯ ನನಗೆ ಇಲ್ಲ. ಅವರು ಹುರಳಿಕುಪ್ಪಿ ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ. ನಾನು ಹುರಳಿಕುಪ್ಪಿ ಗ್ರಾಮದಲ್ಲಿ ವಾಸವಾಗಿದ್ದೆನೆ. ಒಂದೇ ಗ್ರಾಮಸ್ಥರು ಇದ್ದರೆ ಒಬ್ಬರಿಗೊಬ್ಬರ ಪರಿಚಯ ಇರುತ್ತದೆ ಎಂದರೆ ಗ್ರಾಮ ದೊಡ್ಡದಿರುವುದರಿಂದ ಗೊತ್ತಾಗುವುದಿಲ್ಲ. ವಾದಿಯರು ದಾವಾ ಆಸ್ತಿ ತಮ್ಮದು ಎಂದು ಕೇಸು ದಾಖಲಿಸಿರುತ್ತಾರೆ, ಆದರೆ ನಾನು ಮಲ್ಲಪ್ಪ ಹೊಸಳ್ಳಿರವರಿಂದ ಆಸ್ತಿ ಖರೀದಿ ಮಾಡಿರುತ್ತೇನೆ. ಖರೀದಿ ಮಾಡಿದ ಆಸ್ತಿ ಮೂಲತಃ ಯಾರ ಆಸ್ತಿ ಎಂದರೆ ಸಾಕ್ಷಿಯು ಅದು ಮಲ್ಲಪ್ಪ ಹೊಸಳ್ಳಿರವರ ಹೆಸರಿನಲ್ಲಿ ಖಾತೆ ಇದ್ದು ಪಂಚಾಯತಿಯಲ್ಲಿ ದಾಖಲೆ ನೋಡಿ ಕೇಳಲಾಗಿ ಖರೀದಿ ಮಾಡಬಹುದು ಎಂದು ಹೇಳಿದ್ದರಿಂದ ನಾನು ಭೂ–ಪರಿವರ್ತಿತ ನಿವೇಶನ ಖರೀದಿಸಿದ್ದೆನೆ. ಸದರಿ ಆಸ್ತಿ ಯಾವಾಗ ಭೂ–ಪರಿವರ್ತನೆ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ.

ನಾನು ಖರೀದಿಸಿದ ಆಸ್ತಿ ಮಲ್ಲಪ್ಪ ಹೊಸಳ್ಳಿಗೆ ಯಾವ ರೀತಿ ಬಂದಿತ್ತು ಎನ್ನುವುದಕ್ಕೆ ದಾಖಲೆ ನೋಡಿದ್ದು ಅವರ ಹೆಸರಿನಲ್ಲಿ ಖರೀದಿ ಪತ್ರ ಇತ್ತು. ಮಲ್ಲಪ್ಪ ಹೊಸಳ್ಳಿ ಈ ದಾವೆಯ 20 ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. 20 ನೇ ಪ್ರತಿವಾದಿ ಆಸ್ತಿಯನ್ನು ಕುಲಕರ್ಣಿರವರಿಂದ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ನಾನು ಖರೀದಿಸಿದ ಆಸ್ತಿಯ ಸಂಖ್ಯೆ 1112. ಸದರಿ ಆಸ್ತಿ ಕೃಷಿ ಜಮೀನೋ ಅಥವಾ ಪಂಚಾಯತ ಆಸ್ತಿಯೋ ಎಂದು ಹೇಳಲು ನನಗೆ ಗೊತ್ತಾಗುವುದಿಲ್ಲ ಏಕೆಂದರೆ ನಾನು ಅವಿದ್ಯಾವಂತ.

ನಾನು ಎಪಿಎಂಸಿ ಯ ಮಾಜಿ ಸದಸ್ಯ ಎಂದರೆ ಸರಿ. ಈಗ ನನಗೆ 48 ವರ್ಷ ವಯಸ್ಸು. ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದಿರುವ ವಯಸ್ಸು 32 ಸುಳ್ಳೋ ನಿಜವೋ ಎಂಬ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರ ನೀಡಿಲ್ಲ. ನಿಡಿ 128 ರಲ್ಲಿ ನನ್ನ ವಯಸ್ಸು 32 ಬರೆಸಿದ್ದೆನೆ ಎಂದರೆ ನಾನು ಅವಿದ್ಯಾವಂತನಾಗಿರುವುದರಿಂದ ಹೆಚ್ಚು ಕಡಿಮೆ ಬರೆಸಿರುತ್ತೇನೆ. ನಿಡಿ 128 ರಲ್ಲಿ ಸರ್ವೇ ನಂಬರ 164 ಎಂದು ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ 164 ರ ಉತಾರ ಈಗಲೂ ವಾದಿಯರ ಹಾಗೂ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.

20 ನೇ ಪ್ರತಿವಾದಿ ಆಸ್ತಿಯನ್ನು ಯಾವಾಗ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಬರ 164 ಮೂಲತಃ ಕುಲಕರ್ಣಿರವರ ಜಮೀನು ಎಂದರೆ ನನಗೆ ಗೊತ್ತಿಲ್ಲ. 1 ನೇ ವಾದಿಯ ಗಂಡನಾದ ವಿನಾಯಕರಾವ ಕುಲಕರ್ಣಿರವರ ತಂದೆಗೆ ಇಬ್ಬರು ಸಹೋದರರು ಇದ್ದು ಅವರುಗಳ ಹೆಸರು ಗುರುರಾವ ಕುಲಕರ್ಣಿ, ದತ್ತಾತ್ರೇಯ ಕುಲಕರ್ಣಿ ಹಾಗೂ ಶಂಕರರಾವ ಕುಲಕರ್ಣಿ ಎಂದರೆ ನನಗೆ ಗೊತ್ತಿಲ್ಲ. ಅವರ ವಂಶಸ್ಥರ ಮನೆಗಳು ಹುರಳಿಕುಪ್ಪಿ ಗ್ರಾಮದಲ್ಲಿ ಬೇರೆ ಬೇರೆ ಇವೆ ಎಂದರೆ

ನನಗೆ ಗೊತ್ತಿಲ್ಲ. ಆಸ್ತಿ ಖರೀದಿ ಮಾಡಿದರೆ ಮೂಲ ಮಾಲೀಕರ ಹೆಸರು ಕಡಿಮೆ ಮಾಡಿ ನಮ್ಮ ಹೆಸರು ದಾಖಲಿಸಿರುತ್ತಾರೆ ಎಂದರೆ ಆಸ್ತಿಯ ಪಂಚಾಯತ ದಾಖಲೆಯಲ್ಲಿ 20 ನೇ ಪ್ರತಿವಾದಿಯ ಹೆಸರು ಇರುವುದನ್ನು ನೋಡಿ ನಾನು ಆಸ್ತಿ ಖರೀದಿಸಿರುತ್ತೇನೆ.

ನನ್ನ ಮತ್ತು 20 ನೇ ಪ್ರತಿವಾದಿಯ ನಡುವೆ ಖರೀದಿ ವ್ಯವಹಾರ ಅವರ ಮನೆಯಲ್ಲಿ ಆಗಿರುತ್ತದೆ. ಖರೀದಿ ಮಾತುಕತೆ ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಸದರಿ ಮಾತುಕತೆ ಸಮಯದಲ್ಲಿ ಯಲ್ಲಪ್ಪ ಗುಂಜಾಳ ಹಾಗೂ ಈರಬಸಪ್ಪ ಕಮಡೊಳ್ಳಿ ಹಾಜರಿದ್ದರು. ಖರೀದಿ ಮಾತುಕತೆ ರೂ. 1,35,000/– ಕ್ಕೆ ಆಗಿತ್ತು. ಖರೀದಿ ಪತ್ರ ಬರೆಯಲು 20 ನೇ ಪ್ರತಿವಾದಿ ಮಾಹಿತಿ ಕೊಟ್ಟಿದ್ದರು. ಖರೀದಿ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನನಗೆ ಓದಲು ಬರುವುದಿಲ್ಲ. ಸದರಿ ಖರೀದಿ ಪತ್ರದಲ್ಲಿ ಯಾರು ದಸ್ತೂರ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ.

20 ನೇ ಪ್ರತಿವಾದಿಗೆ ಆಸ್ತಿ ಹೇಗೆ ಬಂದಿತ್ತು ಎಂದು ನನಗೆ ಮಾಹಿತಿ ಇಲ್ಲ. 20 ನೇ ಪ್ರತಿವಾದಿ ಆಸ್ತಿ ಖರೀದಿ ಮಾಡುವಾಗ ಖರೀದಿ ಪತ್ರಕ್ಕೆ ವಾದಿಯರ ಮತ್ತು 1 ನೇ ಪ್ರತಿವಾದಿಯ ಸಹಿ ಪಡೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ವಾದಿಯರ ಹಕ್ಕು ನಷ್ಟ ಪಡಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಈ ದಾವೆಯಲ್ಲಿ ಗುರುರಾವ ಕುಲಕರ್ಣಿ, ದತ್ತಾತ್ರೇಯ ಕುಲಕರ್ಣಿ ಹಾಗೂ ವಿನಾಯಕ ಕುಲಕರ್ಣಿ ರವರನ್ನು

ಪಾರ್ಟಿ ಮಾಡಿಲ್ಲ ಎಂದು ಸುಳ್ಳು ಬರೆಸಿದ್ದೆನೆ ಎಂದರೆ ನಾನು ಅದನ್ನು ಬರೆಸಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಇನ್ನೂ ಅನೇಕ ಜನರನ್ನು ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದು ಬರೆಸಿದ್ದು ಅವರು ಯಾರು ಎಂಬ ಪ್ರಶ್ನೆಗೆ ಸಾಕ್ಷಿಯು 20 ನೇ ಪ್ರತಿವಾದಿಯಿಂದ ಬಹಳಷ್ಟು ಜನರು ಆಸ್ತಿ ಖರೀದಿಸಿದ್ದಾರೆ ಆದರೆ ಅವರೆಲ್ಲರ ಹೆಸರು ನನಗೆ ಗೊತ್ತಿಲ್ಲ. ಗೊತ್ತಿಲ್ಲದಿರುವ ವಿಷಯವನ್ನು ಮುಖ್ಯ ವಿಚಾರಣೆಯಲ್ಲಿ ಯಾಕೆ ಬರೆಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರ ನೀಡಿಲ್ಲ. ಈ ಪ್ರಕರಣದಲ್ಲಿ ಪ್ರತಿವಾದ ಪತ್ರ ಸಲ್ಲಿಸಲು ನಾನು ವಕೀಲರಿಗೆ ಮಾಹಿತಿ ಕೊಟ್ಟಿದ್ದೆ. ಪ್ರತಿವಾದ ಪತ್ರದಲ್ಲಿ ಬರೆದ ವಿಷಯಗಳನ್ನು ನಾನು ಓದಿಸಿ ತಿಳಿದುಕೊಂಡಿಲ್ಲ. ವಾದಿಯರ ಆಸ್ತಿ ಖರೀದಿ ಮಾಡದಿದ್ದರೂ ಸಹ ಖೊಟ್ಟಿ ಖರೀದಿ ಪತ್ರ ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)